# <u>ನಗರಸಭಾ ಕಾರ್ಯಾಲಯ, ದೊಡ್ಡಬಳ್ಳಾಪುರ</u>

ನಸದೊ/ಸಾ.ಸ./01/2009-10 ದಿನಾಂಕ:02-11-2009

## <u>-:: ಸಾಮಾನ್ಯ ಸಭೆಯ ನಡವಳಿಕೆಗಳು ::-</u>

ದಿನಾಂಕ:02-11-2009ರಂದು ಸೋಮವಾರ ಬೆಳಿಗ್ಗೆ 11.00 ಗಂಟೆಗೆ ನಗರಸಭೆಯ ಸಭಾಂಗಣ ದಲ್ಲಿ ಮಾನ್ಯ ನಗರಸಭಾ ಅಧ್ಯಕ್ಷರಾದ **ಶ್ರೀ ಎನ್. ಮಲ್ಲಿಕಾರ್ಜುನರವರ** ಅಧ್ಯಕ್ಷತೆಯಲ್ಲಿ ಮಾನ್ಯ ಉಪಾಧ್ಯಕ್ಷರು, ಮಾನ್ಯ ಸ್ಥಾಯಿ ಸಮಿತಿ ಅಧ್ಯಕ್ಷರು ಹಾಗೂ ಮಾನ್ಯ ಸದಸ್ಯರುಗಳು ಹಾಗೂ ಮಾನ್ಯ ನಾಮನಿರ್ದೇಶಿತ ಸದಸ್ಯರುಗಳವರ ಸಮ್ಮುಖದಲ್ಲಿ ನಡೆದ ಸಾಮಾನ್ಯ ಸಭೆಯ ನಡವಳಿಕೆಗಳು:-

**<u>ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳ ವಿವರ:</u>**

| ಸದಸ್ಯರುಗಳು | ಹಾಜರಿ | ಗೈರು ಹಾಜರಿ | ಒಟ್ಟು |
|---|---|---|---|
| | 26 | 05 | 31 |
| ನಾಮ ನಿರ್ದೇಶಿತ ಸದಸ್ಯರುಗಳು | 03 | 02 | 05 |

ಮೊದಲಿಗೆ ನಗರಸಭೆಯ ಆಯುಕ್ತರಾದ **ಶ್ರೀ ಎಸ್. ಪ್ರಭುದೇವ್, ಕೆ.ಎಂ.ಎ.ಎಸ್. ರವರು** ಮಾತನಾಡಿ ನಗರಸಭೆಯ ಮಾನ್ಯ ಅಧ್ಯಕ್ಷರಾದ **ಶ್ರೀ ಎನ್.ಮಲ್ಲಿಕಾರ್ಜುನರವರಿಗೆ, ಮಾನ್ಯ ಉಪಾಧ್ಯಕ್ಷರಾದ ಶ್ರೀ ಜಿ.ಎಸ್. ಸೋಮರುದ್ರಶರ್ಮ ರವರಿಗೆ, ಮಾನ್ಯ ಸ್ಥಾಯಿ ಸಮಿತಿ ಅಧ್ಯಕ್ಷರಾದ ಶ್ರೀ ಡಿ.ಎಂ. ಚಂದ್ರಶೇಖರ್‌ರವರಿಗೆ, ಹಾಗೂ ಮಾನ್ಯ ಸದಸ್ಯರವರಿಗೂ ಮತ್ತು ನಾಮ ನಿರ್ದೇಶತ ಸದಸ್ಯರವರಿಗೂ ಸಭೆಯಲ್ಲಿ ಸ್ವಾಗತವನ್ನು ಕೋರಿ,** ನಂತರ ಮಾನ್ಯ ಅಧ್ಯಕ್ಷರಲ್ಲಿ ಸಭೆಯನ್ನು ಪ್ರಾರಂಭಿಸಲು ಅನುಮತಿಯನ್ನು ಕೋರಿದರು.

**<u>ವಿಷಯ ಸಂಖ್ಯೆ:1</u>**

ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲಿಸುವ ವಿಚಾರ.

**<u>ತೀರ್ಮಾನ ಸಂಖ್ಯೆ:1</u>**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ದಿನಾಂಕ:27-02-2009 ರ ಸಾಮಾನ್ಯ ಸಭೆಯ ವಿಷಯ ಸಂಖ್ಯೆ.6/2ರ ತೀರ್ಮಾನದಂತೆ ಇದೂವರೆವಿಗೂ ಕ್ರಮ ಜರುಗಿಸದೇ ಇರುವುದಕ್ಕೆ ಆಕ್ಷೇಪಣೆಯನ್ನು ವ್ಯಕ್ತಪಡಿಸಿ, ಕೂಡಲೇ ರಾಜ ಕಾಲುವೆಗಳ ಒತ್ತುವರಿಯನ್ನು ತೆರವುಗೊಳಿಸಲು ಕ್ರಮಕೈಗೊಳ್ಳಲು ಹಾಗೂ ತೆರವುಗೊಳಿಸುವ ವೇಳೆಯಲ್ಲಿ ಪೂರ್ಣ ಕೌನ್ಸಿಲ್ ಬೆಂಬಲವನ್ನು ಅಧಿಕಾರಿ ವೃಂದದವರಿಗೆ ನೀಡುವುದಾಗಿ ಮತ್ತು 6/3ರ ತೀರ್ಮಾನದಂತೆ 10ನೇ ಹಣಕಾಸು ಯೋಜನೆಯಡಿ ನಿರ್ಮಾಣವಾಗಿರುವ 14 ಅಂಗಡಿ ಮಳಿಗೆಗಳ ವಸೂಲಾತಿ ಬಗ್ಗೆ ಕ್ರಮವಹಿಸುವಂತೆ ರಾಜಸ್ವ ನಿರೀಕ್ಷಕರಿಗೆ ತಿಳಿಸಲಾಯಿತು. ಹಾಗೂ ಉಳಿದಂತೆ ಹಿಂದಿನ ಸಭೆಗಳ ನಡವಳಿಕೆಗಳನ್ನು ಓದಿ ದಾಖಲಿಸಲಾಯಿತು.

**<u>ವಿಷಯ ಸಂಖ್ಯೆ:2</u>**

ಸರ್ಕಾರದಿಂದ ಬಂದಿರುವ ಸುತ್ತೋಲೆಗಳನ್ನು ಓದಿ ದಾಖಲಿಸುವ ವಿಚಾರ,

**<u>ತೀರ್ಮಾನ ಸಂಖ್ಯೆ:2</u>**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ನಿರ್ವಹಿಸಿದ ಕಾಮಗಾರಿಗಳ ಪರಿಶೀಲನೆಗೆ 3ನೇ ವ್ಯಕ್ತಿಯ ವರದಿಯ ಬಗ್ಗೆ ಆಕ್ಷೇಪಣೆಯನ್ನು ವ್ಯಕ್ತಪಡಿಸಲಾಯಿತು. ಉಳಿದಂತೆ ಸರ್ಕಾರದಿಂದ ಬಂದಿರುವ ಸುತ್ತೋಲೆ ಪತ್ರಗಳನ್ನು ಓದಿ ದಾಖಲಿಸಲಾಯಿತು.

**<u>ವಿಷಯ ಸಂಖ್ಯೆ:3</u>**

ಫೆಬ್ರವರಿ-2009 ರಿಂದ ಜೂನ್-2009ರ ಮಾಹೆಗಳ ಜನನ-ಮರಣಗಳ ವಿವರಗಳನ್ನು ಓದಿ ದಾಖಲಿಸುವ ವಿಚಾರ.

**<u>ತೀರ್ಮಾನ ಸಂಖ್ಯೆ:3</u>**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಈ ಕೆಳಕಂಡಂತೆ ಫೆಬ್ರವರಿ-2009 ರಿಂದ ಜೂನ್-2009ರ ವರೆಗಿನ ಜನನ-ಮರಣಗಳ ವಿವರಗಳನ್ನು ಓದಿ ದಾಖಲಿಸಲಾಯಿತು.

| ಕ್ರ. ಸಂ | ಮಾಹೆವಾರು | ಜನನ | | | ಮರಣ | | |
|---|---|---|---|---|---|---|---|
| | | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| 1 | ಫೆಬ್ರವರಿ–2009 | 228 | 223 | 451 | 40 | 16 | 56 |
| 2 | ಮಾರ್ಚ್–2009 | 170 | 172 | 342 | 25 | 30 | 55 |
| 3 | ಏಪ್ರಿಲ್–2009 | 89 | 145 | 234 | 22 | 15 | 37 |
| 4 | ಮೇ–2009 | 156 | 156 | 312 | 31 | 19 | 50 |
| 5 | ಜೂನ್–2009 | 115 | 145 | 260 | 37 | 13 | 50 |
| | **ಒಟ್ಟು** | **758** | **841** | **1599** | **155** | **93** | **248** |

**ವಿಷಯ ಸಂಖ್ಯೆ:4**

ದಿನಾಂಕ:23–10–2009ರಂದು ನಡೆದ ಸ್ಥಾಯಿಸಮಿತಿಯ ನಡವಳಿಕೆಗಳನ್ನು ಅನುಮೋದಿಸುವ ವಿಚಾರ.

**ತೀರ್ಮಾನ ಸಂಖ್ಯೆ:4**

ದಿನಾಂಕ:23–10–2009 ರಂದು ನಡೆದ ಸ್ಥಾಯಿ ಸಮಿತಿಯ ಈ ಕೆಳಕಂಡ ನಡವಳಿಕೆಗಳನ್ನು ಚರ್ಚಿಸಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ:1**

ಫೆಬ್ರವರಿ–2009ರ ಮಾಹೆಯಿಂದ ಸೆಪ್ಟಂಬರ್–2009ರವರೆಗೆ ಜಮಾ–ಖರ್ಚನ್ನು ಅನುಮೋದಿಸುವ ವಿಚಾರ.

**ತೀರ್ಮಾನ ಸಂಖ್ಯೆ:1**

ಸದರಿ ವಿಷಯವನ್ನು ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಲಾಗಿ ಕೆಲವು ನ್ಯೂನ್ಯತೆಗಳನ್ನು ಸರಿಪಡಿಸಲು ಸೂಚಿಸಿ, ವಕೀಲರ ಸಂಭಾವನೆ ಬಗ್ಗೆ, ಮುದ್ರಣ ವೆಚ್ಚದ ಬಗ್ಗೆ ಆಕ್ಷೇಪವನ್ನು ವ್ಯಕ್ತಪಡಿಸಿ, ಡೀಜ಼ಲ್ ಬಿಲ್ಲುಗಳನ್ನು ತುರ್ತಾಗಿ ನೀಡಲು ಸೂಚಿಸಲಾಯಿತು. ಹಾಗೂ ಇನ್ನು ಮುಂದೆ ಪುರಭವನವನ್ನು ಬಾಡಿಗೆಗೆ ನೀಡಬೇಕಾದಲ್ಲಿ ವಿದ್ಯುತ್ ಯೂನಿಟ್‌ನ್ನು ಗುರ್ತಿಸಿಕೊಂಡು ಎಷ್ಟು ಯೂನಿಟ್‌ಗಳು ಬಳಸಿರುತ್ತಾರೋ, ಅಷ್ಟು ಯೂನಿಟ್‌ಗಳ ಮೊತ್ತವನ್ನು ಕಛೇರಿಗೆ ಪಾವತಿಸಿಕೊಳ್ಳುವಂತೆ ಹಾಗೂ ಸ್ಥಳೀಯ ಪತ್ರಿಕೆಗಳಲ್ಲಿ ಜಾಹಿರಾತು ನೀಡಿದಲ್ಲಿ ಒಂದು ಜಾಹಿರಾತಿಗೆ ರೂ.500/–ಗಳನ್ನು ಮಾತ್ರ ಪಾವತಿಸುವಂತೆ ತೀರ್ಮಾನಿಸಿ, ಉಳಿದಂತೆ ಫೆಬ್ರವರಿ–2009 ರಿಂದ ಸೆಪ್ಟಂಬರ್–2009ರ ವರೆಗೆ ಜಮಾ–ಖರ್ಚುಗಳನ್ನು ಓದಿ ಅನುಮೋದಿಸಲಾಯಿತು

**ವಿಷಯ ಸಂಖ್ಯೆ:2**

ಮಾನ್ಯ ನಗರಸಭಾ ಸದಸ್ಯರುಗಳು ಅವರವರ ವಾರ್ಡ್‌ಗಳಲ್ಲಿ ನಾಗರೀಕರ ಸೌಲಭ್ಯಕ್ಕಾಗಿ ಅಗತ್ಯ ಕಾಮಗಾರಿಗಳನ್ನು ಮಾಡಿಸಿಕೊಡಬೇಕೆಂದು ಕೋರಿ ಕೊಟ್ಟಿರುವ ವಿಚಾರ.

**ತೀರ್ಮಾನ ಸಂಖ್ಯೆ:2**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಮಾನ್ಯ ಸದಸ್ಯರುಗಳು ಅವರವರ ವಾರ್ಡ್‌ಗಳಲ್ಲಿ ನಾಗರೀಕರ ಸೌಲಭ್ಯಕ್ಕಾಗಿ ಕಾಮಗಾರಿಗಳನ್ನು ಮಾಡಿಸುವಂತೆ ನೀಡಿರುವ ಅರ್ಜಿಗಳನ್ನು ಪರಿಶೀಲಿಸಲಾಗಿ, ಎಲ್ಲಾ ಕಾಮಗಾರಿಗಳನ್ನು ನಿರ್ವಹಿಸಲು ನಗರಸಭೆಯ ನಿಧಿಯಲ್ಲಿ ಹಣದ ಕೊರತೆ ಇರುವುದರಿಂದ ಪ್ರತಿ ವಾರ್ಡಿಗೆ ರೂ.1.00 ಲಕ್ಷದಂತೆ ಆಯಾಯ ವಾರ್ಡಿನ ಸದಸ್ಯರುಗಳ ಸೂಚಿಸುವ ಅಗತ್ಯ ಕಾಮಗಾರಿಗಳನ್ನು ನಿರ್ವಹಿಸಲು ಸಭೆಯಲ್ಲಿ ಒಪ್ಪಿ ಸರ್ವಾನುಮತದಿಂದ ತೀರ್ಮಾಸಲಾಯಿತು.

**ಸ್ಥಾಯಿ ಸಮಿತಿ ಅಧ್ಯಕ್ಷರ ಅನುಮತಿಯಿಂದ ಸಭೆಯ ಮುಂದೆ ತರಬಹುದಾದ ಇತರೆ ವಿಚಾರಗಳು.**

**ವಿಷಯ ಸಂಖ್ಯೆ.3/1**

ಸಂಜಯನಗರದ 9ನೇ ಡಿವಿಜನ್ ಸಾರ್ವಜನಿಕರಿಂದ ಬಂದಿರುವ ವಿಚಾರ-ನಗರಸಭೆಯ ರಸ್ತೆ ಮತ್ತು ಮೋರಿಯ ಮೇಲೆ ಗೋಡೆ ಮತ್ತು ಮೆಟ್ಟಿಲನ್ನು ನಿರ್ಮಿಸಿರುವ ವಿಚಾರ.

**ತೀರ್ಮಾನ ಸಂಖ್ಯೆ:3/1**

ಈ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಸ್ಥಳ ಪರಿಶೀಲನೆ ಮಾಡಿ ಅಕ್ರಮವಾಗಿ ರಸ್ತೆ ಒತ್ತುವರಿ ಮಾಡಿಕೊಂಡು ಕಟ್ಟಡ ನಿರ್ಮಿಸಿದ್ದಲ್ಲಿ, ಕಾನೂನಿನ ರೀತ್ಯಾ ತೆರವುಗೊಳಿಸುವಂತೆ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ.3/2**

ರವಿನ್ಯೂ ಖಾತೆಗಳ ಬಗ್ಗೆ ಮಾನ್ಯ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ರವರ ಸುತ್ತೋಲೆ ಸಂಖ್ಯೆ.ಪೌನಿ/ಸ್ವ.ಘೋ.ಆ/83/2003-04 ದಿನಾಂಕ: 08-10-2003 ರ ಸುತ್ತೋಲೆ ಪ್ರಕಾರ ಕ್ರಮ ಕೈಗೊಳ್ಳುವ ವಿಚಾರ.

**ತೀರ್ಮಾನ ಸಂಖ್ಯೆ:3/2**

ಈ ವಿಷಯವನ್ನು ಸಭೆಯಲ್ಲಿ ಕೂಲಂಕುಷವಾಗಿ ಪರಿಶೀಲಿಸಲಾಯಿತು, ಮಾನ್ಯ ಪೌರಾಡಳಿತ ನಿರ್ದೇಶನಾಲಯರವರ ಸುತ್ತೋಲೆ ದಿನಾಂಕ:08-10-2003ರ ಪ್ರಕಾರ ಅಕ್ರಮ ಕಟ್ಟಡಗಳಿಗೆ ದುಪ್ಪಟದರದಲ್ಲಿ ಆಸ್ತಿ ತೆರಿಗೆ ಪಡೆದು ನಮೂನೆ- IIIನ್ನು ನೀಡಬಹುದೆಂದು ತೀರ್ಮಾನಿಸಲಾಯಿತು. ಹಾಗೆಯೇ ನಗರಸಭಾ ವ್ಯಾಪ್ತಿಯಲ್ಲಿ ಸುಮಾರು 9 ಹಳ್ಳಿಗಳಾದ (1) ದರ್ಗಾಜೋಗಿಹಳ್ಳಿ (2) ಕರೇನಹಳ್ಳಿ (3) ಮುತ್ಸಂದ್ರ (4) ಪಾಲನಜೋಗಿಹಳ್ಳಿ (5) ಕುರುಬರಹಳ್ಳಿ (6) ಗಂಗಾಧರಪುರ (7) ರೋಜಿಪುರ (8) ವೀರಭದ್ರನಪಾಳ್ಯ (9) ಮುತ್ತೂರು ಈ ಹಳ್ಳಿಗಳು ನಗರಸಭೆಗೆ ಸೇರ್ಪಡೆಗೊಂಡಿದ್ದು, ಇವುಗಳ ವ್ಯಾಪ್ತಿಯಲ್ಲಿ ರೆವಿನ್ಯೂ ಜಾಗಗಳಲ್ಲಿ (ಸರ್ವೆ ನಂಬರುಗಳ ಸ್ವತ್ತುಗಳು) ಈಗಾಗಲೇ ನಿವೇಶನಗಳನ್ನಾಗಿ ಪರಿವರ್ತಿಸಿ, ವಾಸದ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಾಗುತ್ತಿದೆ. ಹಾಗೂ ಈ ನಿವೇಶನಗಳ ಖಾತೆಯನ್ನು ಈಗಾಗಲೇ ನಗರಸಭೆಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ತೆರೆಯಲಾಗಿದೆ. ಇಂತಹ ಪ್ರಕರಣಗಳಿಗೆ ಕೇವಲ 3 ವರ್ಷಗಳ ಅಂದರೆ 2005-06 ರಿಂದ 2007-08ರ ಅಂತ್ಯಕ್ಕೆ ಮಾತ್ರ ತೆರಿಗೆ ಪಡೆದಿದ್ದು, ಇದರಿಂದ ನಗರಸಭೆಗೆ ಹೆಚ್ಚಿನ ಆದಾಯ ಬಂದಿರುವುದಿಲ್ಲ. ಈ ರೀತಿ ನಗರಸಭೆಗೆ ಆದಾಯ ಸೋರಿ ಹೋಗುತ್ತಿರುವುದನ್ನು ಸರಿಪಡಿಸಲು ಹಾಗೂ ಹೆಚ್ಚಿನ ಸಂಪನ್ಮೂಲ ಕ್ರೂಡೀಕರಿಸುವ ಸಲುವಾಗಿ ಇನ್ನು ಮುಂದೆ ನಗರಸಭೆ ವ್ಯಾಪ್ತಿಯಲ್ಲಿ ಮೇಲ್ಕಂಡ 9 ಹಳ್ಳಿಗಳ ಸರಹದ್ದಿನಲ್ಲಿ ಸರ್ವೆ ನಂಬರು ಜಾಗಗಳಲ್ಲಿ ಅಕ್ರಮವಾಗಿ ವಿಂಗಡಿಸಿ ಉಪಯೋಗಿಸಿಕೊಳ್ಳಲಾಗುತ್ತಿರುವ ನಿವೇಶನ ಮಾಲೀಕರುಗಳು ನಮೂನೆ-IIIನ್ನು ಬಯಸಿ ಬಂದ ಸಂದರ್ಭಗಳಲ್ಲಿ ನಮೂನೆ- IIIನ್ನು ನೀಡುವಾಗ ಆಯಾ ಆರ್ಥಿಕ ವರ್ಷದವರೆವಿಗೆ ನಿವೇಶನ ತೆರಿಗೆಯನ್ನು ದುಪ್ಪಟ್ಟುದರದಲ್ಲಿ ಕಡ್ಡಾಯವಾಗಿ ವಸೂಲಿ ಮಾಡಿಕೊಂಡು ನಮೂನೆ-IIIನ್ನು ನೀಡಬೇಕೆಂದು ಸಭೆಯು ಒಪ್ಪಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ.3/4**

ಹಳೇ ಬಸ್‌ನಿಲ್ದಾಣದ ಸುಲಭ ಶೌಚಾಲಯವನ್ನು ಬಹಿರಂಗ ಹರಾಜು ಮಾಡಲು ದಿನಾಂಕವನ್ನು ನಿಗಧಿಪಡಿಸುವ ವಿಚಾರ.

**ತೀರ್ಮಾನ ಸಂಖ್ಯೆ:3/4**

ಈ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಕಾನೂನ ಪ್ರಕಾರ ಕ್ರಮ ಕೈಗೊಳ್ಳಲು ಹಾಗೂ ದಿನಾಂಕ:16-11-2009ರಂದು ಸೋಮವಾರ ಬೆಳಿಗ್ಗೆ 11.00 ಗಂಟೆಗೆ ಹಳೇ ಬಸ್ ನಿಲ್ದಾಣದ ಹತ್ತಿರ ಪುರಭವನದಲ್ಲಿ ಈ ಕೆಳಕಂಡ ಸುಲಭ್ ಶೌಚಾಲಯಗಳನ್ನು ಹಾಗೂ ಈ ಕೆಳಕಂಡ ವಿಭಾಗಗಳ ನಿರುಪಯುಕ್ತ ಸಾಮಗ್ರಿಗಳನ್ನು ಮತ್ತು ಹಳೇ ಮರಗಳನ್ನು ಹರಾಜು ಮಾಡಲು ಸಹ ತೀರ್ಮಾನಿಸಲಾಯಿತು.

1) ಹಳೇ ಬಸ್ ನಿಲ್ದಾಣದ ಆವರಣದಲ್ಲಿರುವ ಸುಲಭ ಶೌಚಾಲಯ,
2) ಹಳೇ ಬಸ್ ನಿಲ್ದಾಣದ ಹತ್ತಿರ ಪುರಭವನದ ಆವರಣದಲ್ಲಿರುವ ಸುಲಭ ಶೌಚಾಲಯ,
3) ಮಾರ್ಕೇಟ್ ಬಳಿ ಓವರ್ ಹೆಡ್ ನೀರಿನ ಟ್ಯಾಂಕ್ ಕೆಳಭಾಗದಲ್ಲಿರುವ ಸುಲಭ ಶೌಚಾಲಯ.
4) ತಾಲ್ಲೂಕು ಕಛೇರಿ ಆವರಣದಲ್ಲಿರುವ ಸುಲಭ ಶೌಚಾಲಯ,
5) ನಗರ ಪೊಲೀಸ್ ಠಾಣೆ ಹತ್ತಿರ, ಡಿ.ಕ್ರಾಸ್‌ನಲ್ಲಿರುವ ಸುಲಭ ಶೌಚಾಲಯ,

**ಸಾಮಗ್ರಿಗಳ ವಿವರ:-**

| ಕ್ರ.ಸಂ | ಸಾಮಗ್ರಿಗಳ ವಿವರ | ಪರಿಮಾಣ |
|---|---|---|
| | **ನೀರು ಸರಬರಾಜು ಶಾಖೆ** | |
| 1 | ಕ್ಯಾಸ್ಟ್ ಐರನ್ (ಸಿ.ಐ) ಪೈಪ್‌ಗಳು | ಕೆ.ಜಿ.ಗಳಲ್ಲಿ |
| 2 | ಪಿ.ವಿ.ಸಿ. ಪೈಪ್‌ಗಳು ಹಾಗೂ ಇತರೆ ಪಿ.ವಿ.ಸಿ ಸಾಮಗ್ರಿಗಳು | ಕೆ.ಜಿ.ಗಳಲ್ಲಿ |
| 3 | ಸಬ್‌ಮರ್ಸಿಬಲ್ ಮೋಟಾರ್ ಪಂಪ್‌ಗಳು (ವಿವಿಧ ಸಾಮರ್ಥ್ಯ) | ನಂ.ಗಳಲ್ಲಿ |
| 4 | 2 ಇಂಚು ಜಿ.ಐ. ಪೈಪ್‌ಗಳು | ಲೆಂತ್‌ಗಳಲ್ಲಿ |
| 5 | ¼ ಇಂಚು ಜಿ.ಐ. ಪೈಪ್‌ಗಳು | ಲೆಂತ್‌ಗಳಲ್ಲಿ |
| 6 | ವಿವಿಧ ವ್ಯಾಸಗಳ ಸ್ಲ್ಯೂಯಿಸ್ ಮತ್ತು ಗೇಟ್ ವಾಲ್ವ್‌ಗಳು | ನಂ.ಗಳಲ್ಲಿ |
| 7 | ವಿವಿಧ ರೀತಿಯ ಕಬ್ಬಿಣದ ಸಾಮಗ್ರಿಗಳು (ಕಾಲರ್, ಕಪ್ಲಿಂಗ್ಸ್, ಶಾಫ್ಟ್ ಇತ್ಯಾದಿಗಳು) | ಕೆ.ಜಿ.ಗಳಲ್ಲಿ |
| | **ವಿದ್ಯುತ್ ವಿಭಾಗ** | |
| 1 | 40 ವ್ಯಾಟ್ಸ್ ಟ್ಯೂಬ್ ಲೈಟ್‌ಗಳು | ನಂ.ಗಳಲ್ಲಿ |
| 2 | 40 ವ್ಯಾಟ್ಸ್ ಟ್ಯೂಬ್ ಲೈಟ್ ಚೋಕ್ಸ್‌ಗಳು | ನಂ.ಗಳಲ್ಲಿ |
| 3 | 40 ವ್ಯಾಟ್ಸ್ ಟ್ಯೂಬ್ ಲೈಟ್ ಸ್ಟಾರ್ಟರ್ಸ್‌ಗಳು | ನಂ.ಗಳಲ್ಲಿ |
| 4 | 40 ವ್ಯಾಟ್ಸ್ ಟ್ಯೂಬ್ ಲೈಟ್ ಹೋಲ್ಡರ್‌ಗಳು | ನಂ.ಗಳಲ್ಲಿ |
| 5 | 250 ವ್ಯಾಟ್ಸ್ ಸೋಡಿಯಂ ವೇಪರ್ ಲ್ಯಾಂಪ್‌ಗಳು | ನಂ.ಗಳಲ್ಲಿ |
| 6 | 250 ವ್ಯಾಟ್ಸ್ ಸೋಡಿಯಂ ವೇಪರ್ ಲ್ಯಾಂಪ್ ಚೋಕ್ಸ್‌ಗಳು | ನಂ.ಗಳಲ್ಲಿ |
| 7 | 250 ವ್ಯಾಟ್ಸ್ ಸೋಡಿಯಂ ವೇಪರ್ ಲ್ಯಾಂಪ್ ಇಗ್ನೇಟರ್ | ನಂ.ಗಳಲ್ಲಿ |
| 8 | 250 ವ್ಯಾಟ್ಸ್ ಸೋಡಿಯಂ ವೇಪರ್ ಲ್ಯಾಂಪ್ ಹೋಲ್ಡರ್‌ಗಳು | ನಂ.ಗಳಲ್ಲಿ |
| 9 | 250 ವ್ಯಾಟ್ಸ್ ಮೆಟಲ್ ಅಲೈಡ್ ಲ್ಯಾಂಪ್ಸ್ | ನಂ.ಗಳಲ್ಲಿ |
| 10 | 400 ವ್ಯಾಟ್ಸ್ ಮೆಟಲ್ ಅಲೈಡ್ ಲ್ಯಾಂಪ್ಸ್ | ನಂ.ಗಳಲ್ಲಿ |
| 11 | 400 ವ್ಯಾಟ್ಸ್ ಮೆಟಲ್ ಅಲೈಡ್ ಲ್ಯಾಂಪ್ಸ್ ಚೋಕ್ಸ್‌ಗಳು | ನಂ.ಗಳಲ್ಲಿ |
| | **ಆರೋಗ್ಯ ವಿಭಾಗ** | |
| 1 | ಟ್ರ್ಯಾಕ್ಟರ್‌ನ ಬಿಡಿಭಾಗಗಳು | ನಂ.ಗಳಲ್ಲಿ |
| | **ನಗರದ ವಿವಿಧ ಭಾಗಗಳಲ್ಲಿರುವ ಮರಗಳ ಹರಾಜು ವಿವರ** | |
| 2 | ಹಳೇ ಬಸ್ ನಿಲ್ದಾಣದ ನಗರಸಭೆಗೆ ಸೇರಿದ – ನೀಲಗಿರಿ ಮರ–1, ಸಿಲ್ವರ್ ಓಕ್–1, ತೆಂಗಿನ ಮರ–1 | ನಂ.ಗಳಲ್ಲಿ |
| 3 | ಮುನ್ಸಿಪಲ್ ವಸತಿ ಗೃಹದಲ್ಲಿರುವ ಮರಗಳು– ಕತ್ತಿಮರಗಳು–5, ನೀಲಗಿರಿ–3, ಕಾಡುಮರ–2 | ನಂ.ಗಳಲ್ಲಿ |
| 4 | ಕಸಬಾ ಸ್ಟೇಷನ್ ತುಮಕೂರು ರಸ್ತೆಯ ತಿರುವುಗಳಲ್ಲಿ–2 ಮರಗಳು (ಹುಣಸೆ ಮರ–1, ಅರಳಿ ಮರ–1) | ನಂ.ಗಳಲ್ಲಿ |
| 5 | ಕೋರ್ಟ್ ಮುಂಭಾಗದಲ್ಲಿರುವ ಆಲದ ಮರ –1, | ನಂ.ಗಳಲ್ಲಿ |

**ವಿಷಯ ಸಂಖ್ಯೆ.3/5**

ಸಿಮ್ಯಾಕ್ ಸಂಸ್ಥೆಯಲ್ಲಿ ಸದಸ್ಯರಾಗಲು ವಾರ್ಷಿಕ ಸದಸ್ಯತ್ವ ಶುಲ್ಕವಾದ ರೂ.37,500/-ಗಳನ್ನು ಪ್ರಧಾನ ಕಾರ್ಯದರ್ಶಿ, ಸಿಮ್ಯಾಕ್ ಸಂಸ್ಥೆಯ ಪತ್ರ ದಿನಾಂಕ:07-09-2009ರ ರೀತ್ಯಾ ಪಾವತಿಸುವ ವಿಚಾರ.

**ತೀರ್ಮಾನ ಸಂಖ್ಯೆ:3/5**

ಈ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ, ನಗರಸಭೆಯು ಸಿಮ್ಯಾಕ್ ಸಂಸ್ಥೆಯಲ್ಲಿ ಸದಸ್ಯತ್ವವನ್ನು ಪಡೆಯಬೇಕಾದಲ್ಲಿ ರೂ.37,000/-ಗಳನ್ನು ಪಾವತಿಸಬೇಕಾಗಿರುವುದರಿಂದ, ಈ ಮೊತ್ತವನ್ನು ಸಿಮ್ಯಾಕ್ ಸಂಸ್ಥೆಗೆ ಪಾವತಿಸಲು ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ.3/6**

ಉಪ ನಿರ್ದೇಶಕರು, ಬೆಂಗಳೂರು ಗ್ರಾಮಾಂತರ ಗ್ರಂಥಾಲಯ, ವಿಜಯನಗರ, ಬೆಂಗಳೂರು ರವರ ಪತ್ರದ ದಿನಾಂಕ:17-09-2009 ರಲ್ಲಿ ತಿಳಿಸಿರುವಂತೆ ದೊಡ್ಡಬಳ್ಳಾಪುರ ನಗರದ ಶಾಖಾ ಗ್ರಂಥಾಲಯದ ಕಟ್ಟಡ ಶಿಥಿಲವಾಗಿರುವುದರಿಂದ ಕಟ್ಟಡ ನಿರ್ಮಾಣ ಮಾಡುವವರೆಗೂ ನಗರಸಭಾ ವ್ಯಾಪ್ತಿಯಲ್ಲಿರುವ ಕಟ್ಟಡವನ್ನು ಕೋರಿರುವ ವಿಚಾರ.

**ತೀರ್ಮಾನ ಸಂಖ್ಯೆ:3/6**

ಈ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ, ದೊಡ್ಡಬಳ್ಳಾಪುರ ಶಾಖಾ ಗ್ರಂಥಾಲಯವು ಶಿಥಿಲಗೊಂಡಿದ್ದು, ಗ್ರಂಥಾಲಯದಲ್ಲಿ ಸಾರ್ವಜನಿಕರು ದಿನನಿತ್ಯ ವಾಚನಾಲಯವನ್ನು ಉಪಯೋಗಿಸಿ ಕೊಳ್ಳುತ್ತಿದ್ದು, ಶಿಥಿಲಗೊಂಡಿರುವ ಗ್ರಂಥಾಲಯದಲ್ಲಿ ಯಾವ ವೇಳೆಯಲ್ಲಾದರು ಅಘಘಾತ ಸಂಭವವಿರುವುದರಿಂದ, ಗ್ರಂಥಾಲಯಕ್ಕೆ ಕಟ್ಟಡ ನಿರ್ಮಾಣವಾಗುವವರೆಗೂ ತಾತ್ಕಾಲಿಕವಾಗಿ ಹಳೇ ಬಸ್ ನಿಲ್ದಾಣ ಪುರಭವನದ ಹತ್ತಿರ 10ನೇ ಹಣಕಾಸು ಯೋಜನೆಯಡಿಯಲ್ಲಿ ನಿರ್ಮಾಣವಾಗಿರುವ 1ನೇ ಅಂಗಡಿ ಅಥವಾ ಕೊನೆಯ ಅಂಗಡಿಯನ್ನು ಗ್ರಂಥಾಲಯಕ್ಕೆ ಬಳಸಿಕೊಳ್ಳಲು ನೀಡುವಂತೆ ಸಭೆಯುಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ.3/7**

ಅಧ್ಯಕ್ಷರು, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್‌ರವರ ಪತ್ರದ ದಿನಾಂಕ:15-02-2009 ರಲ್ಲಿ ಕೋರಿರುವಂತೆ ಶ್ರೇಷ್ಠ ಸಾಹಿತಿಗಳ ಭಾವಚಿತ್ರಗಳು ನಶಿಸಿ ಹೋಗುತ್ತಿದ್ದು, ತುರ್ತಾಗಿ ಅವುಗಳನ್ನು ಉಳಿಸಿಕೊಳ್ಳಬೇಕಾದಲ್ಲಿ ಸ್ಥಳಾಂತರ ಮಾಡಬೇಕಾಗಿರುತ್ತದೆ, ಹಾಗೂ ನಗರಸಭೆಯ ಆಶ್ರಯದಲ್ಲೇ ಇದ್ದುದರಿಂದ ಸ್ಥಳವನ್ನು ನೀಡಬೇಕೆಂದು ಕೋರಿರುವ ವಿಚಾರ.

**ತೀರ್ಮಾನ ಸಂಖ್ಯೆ:3/7**

ಈ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಕಟ್ಟಡವು ಶಿಥಿಲಗೊಂಡಿದ್ದು, ಈ ಕಟ್ಟಡದಲ್ಲಿರುವ ಶ್ರೇಷ್ಠ ಸಾಹಿತಿಗಳವರ ಭಾವಚಿತ್ರಗಳನ್ನು ಉಳಿಸಿಕೊಳ್ಳ ಬೇಕಾದಲ್ಲಿ ನಗರಸಭೆಯ ಆಶ್ರಯದಲ್ಲಿರುವ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿಗೆ ತಾತ್ಕಾಲಿಕವಾಗಿ ಸೂಕ್ತಸ್ಥಳವನ್ನು ಪರಿಶೀಲನೆ ಮಾಡಿ ನೀಡುವಂತೆ ತೀರ್ಮಾನಿಸಿರುವುದರಿಂದ ಪುರಭವನದ ಒಂದು ಕೊಠಡಿಯಲ್ಲಿ ಶ್ರೇಷ್ಠ ಸಾಹಿತಿಗಳವರ ಭಾವ ಚಿತ್ರಗಳನ್ನು ಇಟ್ಟುಕೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಹಾಗೂ ಇತರೆ ಸ್ಥಾಯಿ ಸಮಿತಿ ಸಭೆಯ ಉಳಿಕೆ ಎಲ್ಲಾ ವಿಷಯಗಳನ್ನು ಸಾಮಾನ್ಯ ಸಭೆಯಲ್ಲಿ ಅಂಗೀಕರಿಸಲಾಯಿತು.

**<u>ಅಧ್ಯಕ್ಷರ ಅಪ್ಪಣೆ ಮೇರೆಗೆ ತರಬಹುದಾದ ಇತರೆ ವಿಷಯಗಳು:</u>**

**<u>ವಿಷಯ ಸಂಖ್ಯೆ: 5/1</u>**

ತಹಶೀಲ್ದಾರ್‌ರವರ ಪತ್ರದ ಸಂಖ್ಯೆ.ನಂ.ಎಲ್.ಎನ್.ಡಿ/ಸಿಆರ್/4/98-99 ದಿನಾಂಕ:16-09-2009ರ ಪತ್ರದಂತೆ ದೊಡ್ಡಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ವೀರಭದ್ರನಪಾಳ್ಯ ಗ್ರಾಮದ ಸರ್ವೆ ನಂ.25ರಲ್ಲಿ 3-12 ಎ.ಗುಂ. ಜಮೀನನ್ನು ವಾಪಸ್ಸು ಪಡೆದಿರುವ ವಿಚಾರ.

**<u>ತೀರ್ಮಾನ ಸಂಖ್ಯೆ:5/1</u>**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ, ವೀರಭದ್ರನಪಾಳ್ಯದ ಸರ್ವೆ ನಂ.25ರಲ್ಲಿನ 3ಎಕರೆ 12 ಗುಂಟೆ ಜಮೀನು ನಗರದ ಮಧ್ಯಭಾಗದಲ್ಲಿದ್ದು, ಪುರಸಭೆಯಿಂದಲೂ ಈ ಜಾಗವನ್ನು ನಗರಸಭೆಯು ಬಳಸಿಕೊಳ್ಳುತ್ತಾ ಬಂದಿದ್ದು, ಊರಿನ ಮಧ್ಯಭಾಗದಲ್ಲಿರುವುದರಿಂದ ಈ ಸ್ವತ್ತನ್ನು ಸಾರ್ವಜನಿಕರಿಗೆ ಉದ್ಯಾನವನ ನಿರ್ಮಾಣ ಮಾಡಲು ತೀರ್ಮಾನ ಕೈಗೊಂಡಿರುವುದರಿಂದ ಇತರೆ ಕಾರ್ಯಗಳಿಗೆ ನೀಡದೇ ಉದ್ಯಾನವನ ನಿರ್ಮಿಸಲು ಈ ಜಾಗವನ್ನು ನಗರಸಭೆಗೆ ಮಂಜೂರು ಮಾಡುವಂತೆ ಮಾನ್ಯ ಜಿಲ್ಲಾಧಿಕಾರಿಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರುರವರಲ್ಲಿ ಮರು ಪ್ರಸ್ತಾವನೆ ಸಲ್ಲಿಸಬೇಕೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**<u>ವಿಷಯ ಸಂಖ್ಯೆ: 5/2</u>**

ಸರ್ಕಾರದ ಕಾರ್ಯದರ್ಶಿಗಳು, ವಸತಿ ಇಲಾಖೆ, ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ.ವಇ18 ಹೆಚ್‌ಎಎಸ್ 2008 ಬೆಂಗಳೂರು ದಿನಾಂಕ:16-09-2009ರಂತೆ ದೊಡ್ಡಬಳ್ಳಾಪುರ ನಗರದ ಆಶ್ರಯ ಸಮಿತಿ ನೇಮಕಾತಿಯಾಗಿರುವ ವಿಚಾರ.

**<u>ತೀರ್ಮಾನ ಸಂಖ್ಯೆ:5/2</u>**

ಈ ವಿಚಾರವನ್ನು ಸಭೆಯಲ್ಲಿ ಚರ್ಚಿಸಲಾಗಿ, ಸರ್ಕಾರದ ಆದೇಶದ ರೀತ್ಯಾ ಆಶ್ರಯ ಸಮಿತಿ ರಚನೆಯಾಗಿರುವುದನ್ನು ಸಭೆಯಲ್ಲಿ ಓದಿ ತಿಳಿಸಲಾಯಿತು.

**<u>ವಿಷಯ ಸಂಖ್ಯೆ: 5/3</u>**

ಶ್ರೀ ಜಿ.ಡಿ. ಜಗದೀಶ್, 3ನೇ ಡಿವಿಜನ್, 22ನೇ ವಾರ್ಡ್, ಹೇಮಾವತಿಪೇಟೆಯವರ ದೂರಿನ ಅರ್ಜಿಯಂತೆ ಖಾತೆ ನಂ.173/167/2818ರ ಸ್ವತ್ತಿನಲ್ಲಿ ರಸ್ತೆ ಒತ್ತುವರಿಯ ಅಳತೆ 7.9X16.7ನ್ನು ಪರಿಶೀಲಿಸುವ ವಿಚಾರ.

**<u>ತೀರ್ಮಾನ ಸಂಖ್ಯೆ:5/3</u>**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ, ಖಾತೆ ನಂ.173/167/2818ರ ಸ್ವತ್ತಿನಲ್ಲಿ ರಸ್ತೆ ಒತ್ತುವರಿ ಮಾಡಿರುವುದಾಗಿ ತಿಳಿಸಿರುವ ಜಾಗವನ್ನು ಮಾನ್ಯ ಅಧ್ಯಕ್ಷರು ಮತ್ತು ಪೌರಾಯುಕ್ತರು ಸ್ಥಳಪರಿಶೀಲಿಸಿ ತೀರ್ಮಾನ ತೆಗೆದುಕೊಳ್ಳುವಂತೆ ಒಪ್ಪಿಗೆ ನೀಡಲಾಯಿತು.

**<u>ವಿಷಯ ಸಂಖ್ಯೆ: 5/4</u>**

ವೀರಭದ್ರನಪಾಳ್ಯದ ಸರ್ಕಾರಿ ಶಾಲಾ ಕಟ್ಟಡಕ್ಕೆ ಶ್ರೀ ಸೈಯದ್ ಅಲ್ತಾಫ್ ಹುಸೇನ್ ರವರ ಸ್ವತ್ತಿನ ಸಂಖ್ಯೆ.1982/1973ಡಿ/660 ಸ್ವತ್ತಿನ ಅಳತೆ 50X40 ಅಡಿಗಳನ್ನು ಶಾಲೆಗೆ ಬಿಟ್ಟುಕೊಡಲು ಒಪ್ಪಿದ್ದು, ದಿನಾಂಕ:27-02-2009ರ ಸಾಮಾನ್ಯ ಸಭೆಯ ವಿಷಯ ಸಂಖ್ಯೆ.6/6ರ ತೀರ್ಮಾನದಂತೆ ಬದಲಿ ಜಾಗ ನೀಡುವ ವಿಚಾರ.

**<u>ತೀರ್ಮಾನ ಸಂಖ್ಯೆ:5/4</u>**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ, ಈ ಹಿಂದಿನ ಸಭೆಯ ದಿನಾಂಕ:27-02-2009ರ ಸಾಮಾನ್ಯ ಸಭೆಯ ವಿಷಯ ಸಂಖ್ಯೆ.6/6ರ ತೀರ್ಮಾನದಂತೆ ಶ್ರೀ ಸೈಯದ್ ಅಲ್ತಾಫ್ ಹುಸೇನ್ ರವರ ಸ್ವತ್ತಿನ ಸಂಖ್ಯೆ.1982/1973ಡಿ/660 ಸ್ವತ್ತಿನಅಳತೆ 50X40 ಅಡಿಗಳನ್ನು ಶಾಲೆಗೆ

ಬಿಟ್ಟುಕೊಟ್ಟಿರುವುದರಿಂದ ಇವರಿಗೆ ಬದಲಿಯಾಗಿ ದೊಡ್ಡಬಳ್ಳಾಪುರನಗರದ ಕೆ.ಎನ್.ಆರ್.ಲೋಕದ ಖಾತೆ ನಂ.2449/2267/2267ರ ನಿವೇಶನ ನಂ.69, 70, 75, 76, 77, 78ರ ಪೈಕಿ ಸ್ಥಳ ಪರಿಶೀಲನೆ ಮಾಡಿ, ಇವರು ಶಾಲೆಗೆ ಬಿಟ್ಟುಕೊಟ್ಟ ಅಳತೆಯಂತೆ ಕಾನೂನಿನ ರೀತ್ಯಾ ಬದಲಿ ನಿವೇಶನ ನೀಡಲು ಮಾನ್ಯ ಜಿಲ್ಲಾಧಿಕಾರಿಗಳಿಗೆ ಮಂಜೂರಾತಿಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ: 5/5**

ನ್ಯಾಯಾಲಯದ ಆದೇಶ ಸಂಖ್ಯೆ ಒ.ಎಸ್.ನಂ.213/2002ರ ರೀತ್ಯಾ 1ನೇ ವಾರ್ಡಿನ ಖಾತೆ ಸಂಖ್ಯೆ.47/43/37ಕ್ಕೆ ಸಂಬಂಧಿಸಿದಂತೆ ಹಕ್ಕು ವರ್ಗಾವಣೆಗೆ ಕಾನೂನು ಸಲಹೆಯನ್ನು ಪಡೆಯುವ ವಿಚಾರ.

**ತೀರ್ಮಾನ ಸಂಖ್ಯೆ:5/5**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಈ ವಿಷಯವನ್ನು ಕೈಬಿಡಲು ತೀರ್ಮಾನಿಸಲಾಯಿತು. ಇನ್ನು ಮುಂದೆ ಇಂತಹ ಪ್ರಕರಣಗಳು ಬಂದಾಗ ಅಗತ್ಯವಿರುವ ಸಂದಂರ್ಭಗಳಲ್ಲಿ ಅರ್ಜಿದಾರರು ಈ ಕಾನೂನು ಸಲಹೆಯ ಖರ್ಚುವೆಚ್ಚಗಳನ್ನು ಭರಿಸಿ, ಸಲಹೆಗಳನ್ನು ಕೊಡಿಸಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ: 5/6**

ಶ್ರೀ ರಾಮಕೃಷ್ಣಬಾಲ್‌ಬ್ಯಾಡ್ಮಿಂಟನ್ ಕ್ಲಬ್, ದೊಡ್ಡಬಳ್ಳಾಪುರರವರಿಗೆ ಕ್ರೀಡಾ ಪ್ರೋತ್ಸಾಹ ಧನವನ್ನು ನೀಡುವಂತೆ ಕೋರಿ ಸಲ್ಲಿಸಿರುವ ಅರ್ಜಿ ವಿಚಾರ.

**ತೀರ್ಮಾನ ಸಂಖ್ಯೆ:5/6**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಶ್ರೀ ರಾಮಕೃಷ್ಣ ಬಾಲ್‌ಬ್ಯಾಡ್ಮಿಂಟನ್ ಕ್ಲಬ್, ದೊಡ್ಡಬಳ್ಳಾಪುರರವರು ಅಂತರರಾಷ್ಟ್ರೀಯ ಮಟ್ಟದಲ್ಲಿ ಕ್ರೀಡಾ ಕೂಟದಲ್ಲಿ ಭಾಗವಹಿಸುತ್ತಿರುವುದರಿಂದ ಈ ಸಂಸ್ಥೆಗೆ ಕ್ರೀಡಾ ಪ್ರೋತ್ಸಾಹ ಧನವಾಗಿ ರೂ.15,000/-ಗಳನ್ನು ನೀಡಬೇಕೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ: 5/7**

ನಗರಸಭಾ ವ್ಯಾಪ್ತಿಯಲ್ಲಿ ಬೀದಿದೀಪಗಳ ನಿರ್ವಹಣೆ ಮತ್ತು ದುರಸ್ಥಿ ಟೆಂಡರ್ ಕರೆಯುವ ವಿಚಾರ.

**ತೀರ್ಮಾನ ಸಂಖ್ಯೆ:5/7**

ಈ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ, ನಗರಸಭಾ ವ್ಯಾಪ್ತಿಯಲ್ಲಿ ಬೀದಿದೀಪಗಳ ನಿರ್ವಹಣೆ ಮತ್ತು ದುರಸ್ಥಿ ಮಾಡುತ್ತಿರುವ ಗುತ್ತಿಗೆದಾರರಾದ ಎ.ಜಿ.ಪವರ್ ಸಿಸ್ಟಂ ರವರ ಗುತ್ತಿಗೆ ಅವಧಿಯು ದಿನಾಂಕ:14-12-2009ಕ್ಕೆ ಮುಗಿಯುವುದರಿಂದ ಮುಂದಿನ ಮೂರು ವರ್ಷಗಳ ಅವಧಿಗೆ ಹೊಸದಾಗಿ ಟೆಂಡರ್ ಕರೆಯಲು ಸಭೆಯಲ್ಲಿ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ: 5/8**

ನಗರಸಭೆಯ ಆರೋಗ್ಯ ವಿಭಾಗದಲ್ಲಿರುವ ಟ್ರ್ಯಾಕ್ಟರ್‌ನ ಹೊಸ ಟೈರ್‌ಗಳನ್ನು ಖರೀದಿಸಿರುವ ವಿಚಾರ.

**ತೀರ್ಮಾನ ಸಂಖ್ಯೆ:5/8**

ನಗರಸಭೆಯ ಆರೋಗ್ಯ ವಿಭಾಗದಲ್ಲಿರುವ ಟ್ರ್ಯಾಕ್ಟರ್‌ನ ಟೈರುಗಳು ಪೂರ್ಣವಾಗಿ ಸವೆದು ಹೋಗಿದ್ದು, ದಿನವಹಿ ಕೆಲಸಕಾರ್ಯಗಳಿಗೆ ತೊಂದರೆಯಾಗುತ್ತಿದ್ದು, ಅತ್ಯಾವಶ್ಯಕವಾಗಿ ಟ್ರ್ಯಾಕ್ಟರ್‌ಗೆ ಹೊಸ ಟೈರ್‌ಗಳು ಬೇಕಾಗಿರುತ್ತದೆ. ಆದ್ದರಿಂದ ಈಗಾಗಲೇ ಹೊಸ ಟೈರ್‌ಗಳನ್ನು ಸ್ಥಳೀಯವಾಗಿ ಖರೀದಿಸಿರುವುದನ್ನು ಸಭೆಯಲ್ಲಿ ಒಪ್ಪಲಾಯಿತು. ಹಾಗೂ ಈ ಖರೀದಿಗೆ ಘಟನೋತ್ತರ ಮಂಜೂರಾತಿ ನೀಡಲಾಯಿತು.

**ವಿಷಯ ಸಂಖ್ಯೆ: 5/9**

ನಗರದ ಗಡಿಗಳ ಪ್ರಾರಂಭದಿಂದಲೇ ದೊಡ್ಡಬಳ್ಳಾಪುರ ನಗರಸಭಾ ವ್ಯಾಪ್ತಿಯಲ್ಲಿ 4 ಕಡೆಗಳಲ್ಲಿ ಬೀದಿದೀಪಗಳನ್ನು ಅಳವಡಿಸಿ, ನಗರದ ಸೌಂದರ್ಯವನ್ನು ಹೆಚ್ಚಿಸಲು ಕ್ರಮಕೈಗೊಳ್ಳುವ ವಿಚಾರ.

**ತೀರ್ಮಾನ ಸಂಖ್ಯೆ:5/9**

ಈ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ದೊಡ್ಡಬಳ್ಳಾಪುರ ನಗರವು ಬೆಂಗಳೂರು ನಗರಕ್ಕೆ ಹತ್ತಿರವಿದ್ದು, ಹೊರ ಊರಿನಿಂದ ಬರುವವರಿಗೆ ದೊಡ್ಡಬಳ್ಳಾಪುರ ನಗರಸಭೆ ವ್ಯಾಪ್ತಿಯಲ್ಲಿ ಸೌಂದರ್ಯ ಹೆಚ್ಚಾಗಿ ಕಾಣುವ ದೃಷ್ಟಿಯಿಂದ ನಗರದ 4 ಗಡಿಗಳಲ್ಲಿ ಪ್ರಾರಂಭದಿಂದಲೇ ರಸ್ತೆ ಬದಿಯಲ್ಲಿ ಸೋಡಿಯಂ ವಿದ್ಯುತ್ ದೀಪಗಳನ್ನು ಅಳವಡಿಸಬೇಕೆಂದು ಸಭೆಯಲ್ಲಿ ತೀರ್ಮಾಸಲಾಯಿತು.

**ವಿಷಯ ಸಂಖ್ಯೆ: 5/10**

ಶ್ರೀ ವಾಸಣ್ಣನವರ ಮನೆ ಹಿಂಭಾಗದ ಸೈಟ್‌ನ್ನು ರಸ್ತೆ ಮಾಡುವ ವಿಚಾರ.

**ತೀರ್ಮಾನ ಸಂಖ್ಯೆ:5/10**

ಈ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ವಾಸಣ್ಣನವರ ಮನೆ ಹಿಂಭಾಗದಲ್ಲಿ ಸಾರ್ವಜನಿಕರ ಸಂಚಾರಕ್ಕೆ ಅನುಕೂಲವಿಲ್ಲದೇ ತುಂಬಾ ತೊಂದರೆಯನ್ನು ಅನುಭವಿಸುತ್ತಿರುವುದರಿಂದ __________ಈ ಜಾಗದಲ್ಲಿ ರಸ್ತೆ ಮಾಡುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ: 5/11**

2009-10ನೇ ಸಾಲಿನಲ್ಲಿ ಹೊಸದಾಗಿ ನೀರು ಸರಬರಾಜು ವಿಭಾಗದ ವಾರ್ಷಿಕ ಟೆಂಡರ್ ಕರೆಯುವ ವಿಚಾರ.

**ತೀರ್ಮಾನ ಸಂಖ್ಯೆ:5/11**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ, ನೀರು ಸರಬರಾಜು ವಿಭಾಗದ ಕಾಮಗಾರಿಗಳಿಗೆ 2008-09ನೇ ಸಾಲಿನ ವಾರ್ಷಿಕ ಟೆಂಡರ್ ಅವಧಿಯು ಮುಗಿದಿರುವುದರಿಂದ, 2009-10ನೇ ಸಾಲಿಗೆ ಹೊಸದಾಗಿ ವಾರ್ಷಿಕ ಟೆಂಡರ್ ಕರೆಯಲು ಸಭೆಯಲ್ಲಿ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ: 5/12**

ದಿನನಿತ್ಯ ರಿಪೇರಿಗಾಗಿ ನೀರು ಸರಬರಾಜು ವಿಭಾಗದಲ್ಲಿ ಅಗತ್ಯವಾಗಿ ಬೇಕಾಗಿರುವ ಪೈಪ್‌ಲೈನ್‌ಗಳು ಹಾಗೂ ಇತ್ಯಾದಿ ಸಾಮಗ್ರಿಗಳು ಮುಗಿದು ಹೋಗಿದ್ದು, ಈಗ ದಿನನಿತ್ಯ ಕೆಲಸಗಳಿಗೆ ಜರೂರಾಗಿ ಈ ಕೆಳಕಂಡ ಸಾಮಗ್ರಿಗಳು ಬೇಕಾಗಿರುವುದರಿಂದಲೂ ಹಾಗೂ ಹೊಸದಾಗಿ ಟೆಂಡರ್ ಪ್ರಸ್ತಾವನೆ ನಡೆಸಿ ತೀರ್ಮಾನ ತೆಗೆದುಕೊಳ್ಳುವುದು ತಡವಾಗುವುದರಿಂದಲೂ ಈಗಾಗಲೇ 2008-09ನೇ ಸಾಲಿನಲ್ಲಿ ಮಂಜೂರಾಗಿರುವ ಟೆಂಡರ್ ದರಗಳಂತೆ ಇವುಗಳನ್ನು ಖರೀದಿಸುವ ವಿಚಾರ.

**ತೀರ್ಮಾನ ಸಂಖ್ಯೆ:5/12**

ಈ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ, 2009-10ನೇ ಸಾಲಿನ ವಾರ್ಷಿಕ ಟೆಂಡರ್ ಪ್ರಕ್ರಿಯೆ ಮುಗಿಯುವವರೆಗೆ ನೀರು ಸರಬರಾಜು ವಿಭಾಗದಲ್ಲಿ ತುರ್ತಾಗಿ ಬೇಕಾಗಿರುವ ಈ ಕೆಳಕಂಡ ಪೈಪ್‌ಗಳು, ವಾಲ್ವ್‌ಗಳು ಹಾಗೂ ಇತರೆ ಸಾಮಗ್ರಿಗಳನ್ನು 2008-09ನೇ ಸಾಲಿನ ವಾರ್ಷಿಕ ಟೆಂಡರ್ ದರದಂತೆ ಖರೀದಿ ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

| ಕ್ರ.ಸಂ. | ಸಾಮಗ್ರಿಗಳ ವಿವರ | ಪರಿಮಾಣ |
|---|---|---|
| 1 | 2ಇಂಚು ಪಿ.ವಿ.ಸಿ. ಪೈಪ್ | 600 ಮೀ. |
| 2 | 2 1/2 ಇಂಚು ಪಿ.ವಿ.ಸಿ. ಪೈಪ್ | 300 ಮೀ. |
| 3 | 3ಇಂಚು ಪಿ.ವಿ.ಸಿ. ಪೈಪ್ | 600 ಮೀ. |
| 4 | 4ಇಂಚು ಪಿ.ವಿ.ಸಿ. ಪೈಪ್ | 300 ಮೀ |
| 5 | 6ಇಂಚು ಪಿ.ವಿ.ಸಿ. ಪೈಪ್ | 150 ಮೀ. |

| | | |
|---|---|---|
| 6 | 2ಇಂಚು ಸ್ಲೂಯೀಸ್ ವಾಲ್ವ್ | 40 ನಂ. |
| 7 | 3ಇಂಚು ಸ್ಲೂಯೀಸ್ ವಾಲ್ವ್ | 25 ನಂ. |

**ವಿಷಯ ಸಂಖ್ಯೆ: 5/13**

ಐ.ಡಿ.ಎಸ್.ಎಂ.ಟಿ. ಯೋಜನೆಯ ನಗರಸಭಾ ಕಾಂಪ್ಲೆಕ್ಸ್‌ನಲ್ಲಿರುವ ಅಂಗಡಿ ಮಳಿಗೆಗಳಿಗೆ ಅಳವಡಿಸಿರುವ ವಿದ್ಯುತ್ ಮೀಟರ್‌ಗಳು ತುಂಬಾ ಹಳೆಯದಾಗಿದ್ದು, ರಿಪೇರಿ ಇರುವುದರಿಂದ ಹೊಸ ಮೀಟರ್‌ಗಳನ್ನು ಅಳವಡಿಸುವ ವಿಚಾರ.

**ತೀರ್ಮಾನ ಸಂಖ್ಯೆ:5/13**

ಈ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಐ.ಡಿ.ಎಸ್.ಎಂ.ಟಿ. ಯೋಜನೆಯ ನಗರಸಭಾ ಕಾಂಪ್ಲೆಕ್ಸ್‌ನಲ್ಲಿರುವ ಅಂಗಡಿ ಮಳಿಗೆಗಳ ಮೀಟರ್‌ಗಳು ತುಂಬಾ ಹಳೆಯದಾಗಿದ್ದು, 15ನಂ. ಹೊಸ ಎಲೆಕ್ಟ್ರಾನಿಕ್ ವಿದ್ಯುತ್ ಮೀಟರ್‌ಗಳನ್ನು ಅಳವಡಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ: 5/14**

ನಗರಸಭಾ ವ್ಯಾಪ್ತಿಯಲ್ಲಿ ಸಾರ್ವಜನಿಕರ ಸೌಕರ್ಯಕ್ಕಾಗಿ ಪ್ರಸ್ತುತ ಇರುವ ಬೀದಿದೀಪಗಳು ಸಾಕಾಗದೇ ಇರುವುದರಿಂದ ಹೊಸದಾಗಿ ವಿದ್ಯುತ್ ದೀಪಗಳನ್ನು ಖರೀದಿಸಿ ಅಳವಡಿಸಲು, ಕ್ರಮಕೈಗೊಳ್ಳಬೇಕಾಗಿರುವುದರಿಂದ ಹಾಗೂ ಈ ಕಾರ್ಯ ಕೂಡಲೇ ಆಗಬೇಕಾಗಿರುವುದರಿಂದ ಈಗಾಗಲೇ ದಿನಾಂಕ:07-01-2009ರಂದು ಟೆಂಡರ್ ಕರೆದಿದ್ದು, ನಗರಸಭಾ ವ್ಯಾಪ್ತಿಯ 31ವಾರ್ಡ್‌ಗಳಲ್ಲಿ ವಿದ್ಯುತ್ ಟ್ಯೂಬ್‌ಲೈಟ್ ಬೀದಿದೀಪಗಳನ್ನು ಅಳವಡಿಸುವ ಕಾಮಗಾರಿಗೆ ಬಂದಿರುವ ಟೆಂಡರ್‌ನ್ನು ಅನುಮೋದಿಸಿ ಮಂಜೂರು ಮಾಡುವ ವಿಚಾರ.

**ತೀರ್ಮಾನ ಸಂಖ್ಯೆ:5/14**

ಈ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ, ತುಲನಾತ್ಮಕ ಪಟ್ಟಿಯಂತೆ, ಈ ಕೆಳಕಂಡಂತೆ ಕಡಿಮೆ ದರ ನಮೂದಿಸಿರುವ ಗುತ್ತಿಗೆದಾರರ ಟೆಂಡರ್ ದರಗಳನ್ನು ಅನುಮೋದಿಸಿ, ನಗರಸಭಾ ವ್ಯಾಪ್ತಿಯ 31ವಾರ್ಡ್‌ಗಳಲ್ಲಿ ವಿದ್ಯುತ್ ಟ್ಯೂಬ್‌ಲೈಟ್ ಬೀದಿದೀಪಗಳನ್ನು ಅಳವಡಿಸಲು ಕಾರ್ಯಾದೇಶವನ್ನು ನೀಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

**ದಿನಾಂಕ:07-01-2009 ರಂದು ಕರೆದಿರುವ ಟೆಂಡರ್ ಕಾಮಗಾರಿಗಳಿಗೆ ಕಡಿಮೆ ದರ ನಮೂದಿಸಿರುವ ಗುತ್ತಿಗೆದಾರರ ವಿವರ:**

| ಕ್ರ. ಸಂ | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ಲಕ್ಷಗಳಲ್ಲಿ) | ಕಡಿಮೆ ದರ ನಮೂದಿಸಿರುವ ಗುತ್ತಿಗೆದಾರರು | ಗುತ್ತಿಗೆದಾರರು ನಮೂದಿಸಿರುವ ದರ |
|---|---|---|---|---|
| **12ನೇ ಹಣಕಾಸು ಮುಕ್ತನಿಧಿ** | | | | |
| 1 | ನಗರಸಭಾ ವ್ಯಾಪ್ತಿಯ 31 ವಾರ್ಡ್‌ಗಳಲ್ಲಿ ವಿದ್ಯುತ್ ಟ್ಯೂಬ್ ಲೈಟ್ ಬೀದಿದೀಪಗಳನ್ನು ಅಳವಡಿಸುವ ಕಾಮಗಾರಿ | 5.30 | ವಿಜಯ ಎಲೆಕ್ಟ್ರಿಕಲ್ಸ್, ದೊಡ್ಡಬಳ್ಳಾಪುರ | ಎಸ್.ಆರ್.ದರಕ್ಕಿಂತ ಶೇ. 7.37% ಹೆಚ್ಚಿಗೆ |

**ವಿಷಯ ಸಂಖ್ಯೆ: 5/15**

ಎಸ್.ಎಫ್.ಸಿ. 2008-09ನೇ ಸಾಲಿನಲ್ಲಿ 16ನೇ ವಾರ್ಡ್‌ನಲ್ಲಿ ನಾಮಫಲಕಗಳನ್ನು ಅಳವಡಿಸುವ ಕಾಮಗಾರಿಗೆ ಬದಲಾಗಿ ಸೋಡಿಯಂ ಬೀದಿದೀಪಗಳನ್ನು ಅಳವಡಿಸುವ ವಿಚಾರ.

**ತೀರ್ಮಾನ ಸಂಖ್ಯೆ:5/15**

ಈ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಎಸ್.ಎಫ್.ಸಿ.2008-09ನೇ ಸಾಲಿನಲ್ಲಿ 16ನೇ ವಾರ್ಡ್‌ನಲ್ಲಿ ನಾಮಫಲಕಗಳನ್ನು ಅಳವಡಿಸುವ ಕಾಮಗಾರಿಯನ್ನು ಮಾಡಿಸಲು ಮಂಜೂರಾತಿ ನೀಡಿದ್ದು, ಈಗ ಇದರ ಬದಲಾಗಿ ಬೀದಿದೀಪಗಳು ಅತ್ಯಾವಶ್ಯಕವಾಗಿರುವುದರಿಂದ ಸೋಡಿಯಂ ಬೀದಿದೀಪಗಳನ್ನು

ಅಳವಡಿಸಲು ಕೋರಿರುವುದನ್ನು ಸಭೆಯಲ್ಲಿ ಒಪ್ಪಿ ಕಾರ್ಯವನ್ನು ಕೈಗೊಳ್ಳುವಂತೆ ತೀರ್ಮಾನಿಸಲಾಯಿತು.

**<u>ವಿಷಯ ಸಂಖ್ಯೆ: 5/16</u>**

ಎಸ್.ಎಫ್.ಸಿ.2007-08ನೇ ಸಾಲಿನ ಸ್ಲಾಟರ್‌ಹೌಸ್ ನಿರ್ಮಿಸುವ ಕಾಮಗಾರಿ ಬದಲಾಯಿಸುವ ವಿಚಾರ.

**<u>ತೀರ್ಮಾನ ಸಂಖ್ಯೆ:5/16</u>**

ಈ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಎಸ್.ಎಫ್.ಸಿ. 2007-08ನೇ ಸಾಲಿನ ಸ್ಲ್ಯಾಟರ್ ಹೌಸ್ ನಿರ್ಮಾಣಕ್ಕೆ ಸ್ಥಳ ನಿಗಧಿಯಾಗದೇ ಇರುವುದನ್ನು ಚರ್ಚಿಸಲಾಗಿ, ಹಾಲಿ ಅರಣ್ಯ ಇಲಾಖೆಯ ಹಿಂಭಾಗದಲ್ಲಿರುವ ಸರ್ವೆ ನಂ.41ರಲ್ಲಿ ಇರುವ ಜಾಗವನ್ನು ನೀಡುವಂತೆ ತಹಶೀಲ್ದಾರ್‌ರವರಿಗೆ ಪತ್ರ ಬರೆದು ಕ್ರಮಕೈಗೊಳ್ಳಲು ತೀರ್ಮಾನಿಸಲಾಯಿತು.

**<u>ವಿಷಯ ಸಂಖ್ಯೆ: 5/17</u>**

ದಿನಾಂಕ:15-09-2009ರಂದು ಮತ್ತು ದಿನಾಂಕ:15-10-2009ರಲ್ಲಿ ಕರೆದಿರುವ 12ನೇ ಹಣಕಾಸು ಯೋಜನೆಯಡಿಯಲ್ಲಿ ಕಾಮಗಾರಿಗಳನ್ನು ನಿರ್ವಹಿಸಲು ಟೆಂಡರ್ ಕರೆದಿದ್ದು, ಟೆಂಡರ್ ದರಗಳನ್ನು ಅನುಮೋದಿಸುವ ವಿಚಾರ.

**<u>ತೀರ್ಮಾನ ಸಂಖ್ಯೆ:5/17</u>**

ಈ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ದಿನಾಂಕ:15-09-2009ರಂದು ಮತ್ತು ದಿನಾಂಕ:15-10-2009ರಲ್ಲಿ ಕರೆದಿರುವ ಟೆಂಡರ್ ಕಾಮಗಾರಿಗಳಿಗೆ ಈ ಕೆಳಕಂಡಂತೆ ಕಡಿಮೆ ದರ ನಮೂದಿಸಿರುವ ಗುತ್ತಿಗೆದಾರರ ಟೆಂಡರ್‌ಗಳನ್ನು ಒಪ್ಪಿ ಕೈಗೊಂಡಿರುವ ಕಾಮಗಾರಿಗಳಿಗೆ ಕಾರ್ಯಾದೇಶ ನೀಡಲು ತೀರ್ಮಾನಿಸಲಾಯಿತು.

**ದಿನಾಂಕ:15-09-2009 ರಂದು ಕರೆದಿರುವ ಟೆಂಡರ್ ಕಾಮಗಾರಿಗಳಗೆ ಕಡಿಮೆ ದರ ನಮೂದಿಸಿರುವ ಗುತ್ತಿಗೆದಾರರ ವಿವರ:**

| ಕ್ರ. ಸಂ | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ಲಕ್ಷಗಳಲ್ಲಿ) | ಕಡಿಮೆ ದರ ನಮೂದಿಸಿರುವ ಗುತ್ತಿಗೆದಾರರು | ಗುತ್ತಿಗೆದಾರರು ನಮೂದಿಸಿರುವ ದರ |
|---|---|---|---|---|
| **12ನೇ ಹಣಕಾಸು ಮುಕ್ತನಿಧಿ** | | | | |
| 1 | ಟೆಲಿಫೋನ್ ಎಕ್ಸ್‌ಚೇಂಜ್ ಹಿಂಭಾಗದ ರಸ್ತೆಯಲ್ಲಿ ತಡೆಗೋಡೆ ನಿರ್ಮಿಸುವುದು | 72000 | ಕೆ.ಬಿ.ಬಚ್ಚೇಗೌಡ ದೊಡ್ಡಬಳ್ಳಾಪುರ. | ಎಸ್.ಆರ್.ದರಕ್ಕಿಂತ ಶೇ. 10.2% ಕಡಿಮೆ |
| 2 | ವಾರ್ಡ್ ನಂ.28ರ ನಾಗಲಾಂಭಿಕೆ ಮನೆಯ ಹತ್ತಿರವಿರುವ ಕೊಳವೆಬಾವಿಯಿಂದ ಮಧುಗಿರಿ ರಸ್ತೆಯ ಹಾಸ್ಟೆಲ್ ವರೆಗೆ 4" ಮುಖ್ಯ ಪೈಪ್‌ಲೈನ್ ಹಾಕುವ ಕೆಲಸ. | 250000 | ಕೆ.ಬಿ.ಬಚ್ಚೇಗೌಡ, ದೊಡ್ಡಬಳ್ಳಾಪುರ. | ಎಸ್.ಆರ್.ದರ ಕ್ಕಿಂತ ಶೇ. 10.2% ಕಡಿಮೆ |
| 3 | ವಾರ್ಡ್ ನಂ.27ರ ರೋಜಿಪುರದ ಕೋರ್ಟ್ ರಸ್ತೆಯಲ್ಲಿ 4" ಮುಖ್ಯ ಪೈಪ್ ಲೈನ್ ಹಾಕುವ ಕೆಲಸ. | 200000 | ಕೆ.ಬಿ.ಬಚ್ಚೇಗೌಡ, ದೊಡ್ಡಬಳ್ಳಾಪುರ. | ಎಸ್.ಆರ್.ದರಕ್ಕಿಂತ ಶೇ. 10.2% ಕಡಿಮೆ |
| 4 | ನಗರಸಭಾ ವ್ಯಾಪ್ತಿಯಲ್ಲಿ ಬರುವ 3 ಕೊಳವೆ ಬಾವಿಗಳಿಗೆ ಸಬ್‌ಮರ್ಸಿಬಲ್ ಮೋಟಾರು ಪಂಪ್, ಕೇಬಲ್ ಮತ್ತು ಕಂಟ್ರೋಲ್ ಪ್ಯಾನಲ್ ಖರೀದಿಸುವ ಕೆಲಸ. | 250000 | ವಿಜಯಶ್ರೀ ಎಂಟರ್‌ಪ್ರೈಸಸ್, ದೊಡ್ಡಬಳ್ಳಾಪುರ. | ಎಸ್.ಆರ್.ದರಕ್ಕಿಂತ ಶೇ. 10% ಕಡಿಮೆ |

| | | | | |
|---|---|---|---|---|
| 5 | ವಾರ್ಡ್ ನಂ.3ರ ಡಿ. ಕ್ರಾಸ್ ಸಾಮಿಲ್ ಹತ್ತಿರ ಕಲ್ವರ್ಟ್ ಕಾಮಗಾರಿ | 17000 | ಕೆ.ಬಿ.ಬಚ್ಚೇಗೌಡ, ದೊಡ್ಡಬಳ್ಳಾಪುರ. | ಎಸ್.ಆರ್.ದರಕ್ಕಿಂತ ಶೇ. 7.2% ಕಡಿಮೆ |
| 6 | ವಾರ್ಡ್ ನಂ.3ರ ಡಿ.ಕ್ರಾಸ್ ಸಾಮಿಲ್ ಹತ್ತಿರ ಆರ್.ಸಿ.ಸಿ. ಚರಂಡಿ ಮಾಡುವುದು | 47000 | ಕೆ.ಬಿ.ಬಚ್ಚೇಗೌಡ, ದೊಡ್ಡಬಳ್ಳಾಪುರ. | ಎಸ್.ಆರ್.ದರಕ್ಕಿಂತ ಶೇ. 10.6% ಕಡಿಮೆ |
| 7 | ವಾರ್ಡ್ ನಂ.1ರ ಸುನಿಲ್ ಮನೆ ಮುಂಭಾಗ ಆರ್.ಸಿ.ಸಿ. ಚರಂಡಿ ಮಾಡುವುದು | 95000 | ಕೆ.ಬಿ.ಬಚ್ಚೇಗೌಡ, ದೊಡ್ಡಬಳ್ಳಾಪುರ. | ಎಸ್.ಆರ್.ದರಕ್ಕಿಂತ ಶೇ. 10.6% ಕಡಿಮೆ |
| 8 | ವಾರ್ಡ್ ನಂ.11ರ ಕರೇನಹಳ್ಳಿ ಗೋವಿಂದಪ್ಪನವರ ಅಂಗಡಿ ಪಕ್ಕದ ರಸ್ತೆಯಲ್ಲಿ ಡೆಕ್ ಸ್ಲಾಬ್ ಕಲ್ವರ್ಟ್ ಕಾಮಗಾರಿ | 30000 | ಕೆ.ಬಿ.ಬಚ್ಚೇಗೌಡ, ದೊಡ್ಡಬಳ್ಳಾಪುರ. | ಎಸ್.ಆರ್.ದರಕ್ಕಿಂತ ಶೇ. 10.6% ಕಡಿಮೆ |
| 9 | ನೇಯ್ಗೆ ಬೀದಿ ಶಾಲೆಯ ಹತ್ತಿರ ಡೆಕ್ ಸ್ಲಾಬ್ ಕಲ್ವರ್ಟ್ ಮಾಡುವುದು | 50000 | ಅಶ್ವತ್ಥನಾರಾಯಣ, ದೊಡ್ಡಬಳ್ಳಾಪುರ. | ಎಸ್.ಆರ್.ದರಕ್ಕಿಂತ ಶೇ. 10% ಹೆಚ್ಚಿಗೆ |
| **12ನೇ ಹಣಕಾಸು ರಸ್ತೆ ಮತ್ತು ಸೇತುವೆ ದುರಸ್ಥಿ** | | | | |
| 10 | ಜೆ.ಸಿ. ಸರ್ಕಲ್‌ನಿಂದ ಹಳೇಬಸ್ ನಿಲ್ದಾಣದ ಮುಖಾಂತರ ಗಾಂಧಿ ಸರ್ಕಲ್‌ವರೆಗೆ ಆಯ್ದ ಭಾಗಗಳಲ್ಲಿ ರಸ್ತೆಯಲ್ಲಿ ಬಿದ್ದಿರುವ ಗುಂಡಿಗಳನ್ನು ಮುಚ್ಚುವ ಕೆಲಸ | 375000 | ಕೆ.ಆರ್.ದಿನೇಶ್, ದೊಡ್ಡಬಳ್ಳಾಪುರ. | ಎಸ್.ಆರ್.ದರಕ್ಕಿಂತ ಶೇ. 5.6% ಕಡಿಮೆ |
| **ನಗರಸಭಾ ನಿಧಿ** | | | | |
| 11 | ಹಳೇ ಬಸ್‌ನಿಲ್ದಾಣದ ಹಿಂಭಾಗದಲ್ಲಿರುವ ಮೂತ್ರಾಲಯ ತೆರವುಗೊಳಿಸುವುದು ಮತ್ತು ಸುಲಭ ಶೌಚಾಲಯದ ಆವರಣವನ್ನು ಅಭಿವೃದ್ಧಿ ಪಡಿಸುವ ಕಾಮಗಾರಿ. | 425000 | ಕೆ.ಬಿ.ಬಚ್ಚೇಗೌಡ ದೊಡ್ಡಬಳ್ಳಾಪುರ | ಎಸ್.ಆರ್.ದರಕ್ಕಿಂತ ಶೇ. 10.6% ಕಡಿಮೆ |

**ದಿನಾಂಕ:15-10-2009 ರಂದು ಕರೆದಿರುವ ಟೆಂಡರ್ ಕಾಮಗಾರಿಗಳಿಗೆ ಕಡಿಮೆ ದರ ನಮೂದಿಸಿರುವ ಗುತ್ತಿಗೆದಾರರ ವಿವರ:**

| ಕ್ರ. ಸಂ | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ಲಕ್ಷಗಳಲ್ಲಿ) | ಕಡಿಮೆ ದರ ನಮೂದಿಸಿರುವ ಗುತ್ತಿಗೆದಾರರು | ಗುತ್ತಿಗೆದಾರರು ನಮೂದಿಸಿರುವ ದರ |
|---|---|---|---|---|
| **ರಸ್ತೆ ಮತ್ತು ಸೇತುವೆ ದುರಸ್ಥಿ ನಿಧಿಯಡಿಯಲ್ಲಿನ ಕಾಮಗಾರಿಗಳು** | | | | |
| 1 | ವಾರ್ಡ್ ನಂ.28ರ ಕನ್ನಡ ಜಾಗೃತ ಪರಿಷತ್ ಮುಂಭಾಗ ಸೋಮೇಶ್ವರ ಬಡಾವಣೆಯ ರಸ್ತೆಯಲ್ಲಿ ಡೆಕ್ ಸ್ಲಾಬ್ ಕಲ್ವರ್ಟ್ ಮಾಡುವ ಕೆಲಸ. | 2.50 | ಎ.ಆರ್. ಲಕ್ಷ್ಮೀನಾರಾಯಣ | ಎಸ್.ಆರ್. ದರಕ್ಕಿಂತ ಶೇ.12.28 ಹೆಚ್ಚಿಗೆ |
| 2 | ವಾರ್ಡ್ ನಂ.04ರ ಕೋರ್ಟ್ ರಸ್ತೆಯಲ್ಲಿರುವ ಕಲ್ಯಾಣಿ ಪಕ್ಕದ ರಸ್ತೆಯಲ್ಲಿ ಮತ್ತು ವಾರ್ಡ್ ನಂ.19ರ ಅ.ನ.ಕೃ ರಸ್ತೆಯಲ್ಲಿರುವ ಅರಸಪ್ಪ ಮನೆಯ ಹತ್ತಿರ ಡೆಕ್ ಸ್ಲಾಬ್ ಕಲ್ವರ್ಟ್ ಕೆಲಸ. | 1.50 | ಅಬ್ದುಲ್ ಅಜೀಜ್ | ಎಸ್.ಆರ್. ದರಕ್ಕಿಂತ ಶೇ.10.08 ಹೆಚ್ಚಿಗೆ |

| | | | | |
|---|---|---|---|---|
| 3 | ವಾರ್ಡ್ ನಂ.27ರ ಮಸೀದಿಯಿಂದ ಲಕ್ಷ್ಮಯ್ಯ ಮನೆವರೆಗೆ ಹಾಗೂ ಕೋರ್ಟ್ ಮುಖ್ಯರಸ್ತೆಯಲ್ಲಿ ಕಾಂಕ್ರೀಟ್ ಚರಂಡಿ ನಿರ್ಮಾಣ | 2.00 | ಸರ್ದಾರ್‌ಪಾಷ | ಎಸ್.ಆರ್. ದರಕ್ಕಿಂತ ಶೇ.8.00 ಹೆಚ್ಚಿಗೆ |
| 4 | ವಾರ್ಡ್ ನಂ.13ರ ಭುವನೇಶ್ವರಿನಗರ ಹೋಟೆಲ್ ರಂಗಪ್ಪನವರ ಮನೆ ಪಕ್ಕ, ದೇವಸ್ಥಾನದ ರಸ್ತೆಗೆ ಮತ್ತು ವಾರ್ಡ್ ನಂ.13ರ ಚಕ್ರದಿಮ್ಮನಕೋಟೆ ಶ್ರೀಧರಪ್ಪ ನವರ ಮನೆ ಹತ್ತಿರ ಡೆಕ್ ಸ್ಲ್ಯಾಬ್ ಮಾಡುವ ಕೆಲಸ. | 1.00 | ರೇಣುಕಾ ಪ್ರಸಾದ್ | ಎಸ್.ಆರ್. ದರಕ್ಕಿಂತ ಶೇ.7.78 ಹೆಚ್ಚಿಗೆ |
| 5 | ವಾರ್ಡ್ ನಂ.19ರ ಅಂಗಡಿ ಮುನಿಯಪ್ಪ ನವರ ಮನೆಯಿಂದ ಕಾಂಕ್ರೀಟ್ ಚರಂಡಿ ಕೆಲಸ, | 1.00 | ಅಬ್ದುಲ್ ಅಜೀಜ್ | ಎಸ್.ಆರ್. ದರಕ್ಕಿಂತ ಶೇ.8.00 ಹೆಚ್ಚಿಗೆ |
| **ಮುಕ್ತ ನಿಧಿಯಡಿಯಲ್ಲಿನ ಕಾಮಗಾರಿಗಳು** | | | | |
| 6 | ನಗರಸಭಾ ಕಾರ್ಯಾಲಯದ ಆವರಣದಲ್ಲಿ ತಾಂತ್ರಿಕ ಶಾಖೆಗೆ ನೂತನ ಕಟ್ಟಡ ನಿರ್ಮಾಣ ಕಾಮಗಾರಿ | 10.00 | ರಾಘವೇಂದ್ರ ಕುಲಕರ್ಣಿ | ಎಸ್.ಆರ್. ದರಕ್ಕಿಂತ ಶೇ.13.03 ಹೆಚ್ಚಿಗೆ |

**ವಿಷಯ ಸಂಖ್ಯೆ: 5/18**

ದೊಡ್ಡಬಳ್ಳಾಪುರ ತಾಲ್ಲೂಕು ವಿದ್ಯುತ್ ಗುತ್ತಿಗೆದಾರರ ಸಂಘದವರು ದಿನಾಂಕ: 20-10-2009ರಂದು ನಿವೇಶನ ಕೋರಿ ಸಲ್ಲಿಸಿರುವ ಅರ್ಜಿ ವಿಚಾರ.

**ತೀರ್ಮಾನ ಸಂಖ್ಯೆ:5/18**

ಈ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ದೊಡ್ಡಬಳ್ಳಾಪುರ ತಾಲ್ಲೂಕು ವಿದ್ಯುತ್ ಗುತ್ತಿಗೆದಾರರ ಸಂಘದ ವತಿಯಿಂದ ಬಂದಿರುವ ಅರ್ಜಿಯನ್ನು ಪರಿಶೀಲಿಸಲಾಗಿ, ಕಾನೂನಿನ ರೀತ್ಯಾ ಮಾರ್ಕೆಟ್ ದರದಂತೆ ಹಣಪಾವತಿಸಿಕೊಂಡು ಸೂಕ್ತ ಸ್ಥಳವನ್ನು ಗುರ್ತಿಸಿ ಕೌನ್ಸಿಲ್ ಸಭೆಯಲ್ಲಿ ಮಂಡಿಸಿ ನೀಡುವಂತೆ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ: 5/19**

2006-07ನೇ ಸಾಲಿನ ಎಸ್.ಎಫ್.ಸಿ. ಮುಕ್ತನಿಧಿಯಡಿಯಲ್ಲಿ ವಾರ್ಡ್ ನಂ.18ರ ಎ.ಆರ್.ರಾಜು ಮನೆಯಿಂದ ಕಣಿತಹಳ್ಳಿರವರ ಮನೆವರೆಗೆ ಜಲ್ಲಿ ರಸ್ತೆಗೆ ಡಾಂಬರೀಕರಣ ಕೆಲಸದ ಬದಲಾಗಿ ವಾರ್ಡ್ ನಂ.17ರಲ್ಲಿ ಸೋಡಿಯಂ ಬೀದಿದೀಪಗಳನ್ನು ಅಳವಡಿಸುವ ಕಾಮಗಾರಿ ವಿಚಾರ.

**ತೀರ್ಮಾನ ಸಂಖ್ಯೆ:5/19**

ಈ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ 2006-07ನೇ ಸಾಲಿನ ಎಸ್.ಎಫ್.ಸಿ. ಮುಕ್ತನಿಧಿಯಡಿಯಲ್ಲಿ ವಾರ್ಡ್ ನಂ.18ರ ಎ.ಆರ್.ರಾಜು ಮನೆಯಿಂದ ಕಣಿತಹಳ್ಳಿರವರ ಮನೆವರೆಗೆ ಜಲ್ಲಿ ರಸ್ತೆಗೆ ಡಾಂಬರೀಕರಣ ಕೆಲಸದ ಬದಲಾಗಿ ವಾರ್ಡ್ ನಂ.17ರಲ್ಲಿ ಸೋಡಿಯಂ ಬೀದಿದೀಪಗಳನ್ನು ಅಳವಡಿಸುವ ಕಾಮಗಾರಿ ಕೈಗೊಳ್ಳಲು ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ: 5/20**

ಜೆ.ಸಿ.ಬಿ. ಯಂತ್ರಕ್ಕೆ ತಾತ್ಕಾಲಿಕವಾಗಿ ಚಾಲಕರವನ್ನು ನೇಮಿಸಿಕೊಳ್ಳುವ ಬಗ್ಗೆ.

**ತೀರ್ಮಾನ ಸಂಖ್ಯೆ:5/20**

ಸದರಿ ವಿಷಯವನ್ನು ಚರ್ಚಿಸಲಾಗಿ ದಿನಾಂಕ:18-08-2009ರಂದು ನಡೆದ ಸ್ಥಾಯಿ ಸಮಿತಿ ವಿಶೇಷ ಸಭೆಯಲ್ಲಿ ವಿಷಯ ಸಂಖ್ಯೆ.1ರಲ್ಲಿ ತೀರ್ಮಾನಿಸಿರುವಂತೆ, ದಿನಾಂಕ:23-09-2009ರಂದು ಕರೆಯಲಾದ ಕೊಟೇಶನ್ ಪ್ರಕಟಣೆಯಂತೆ ಜೆ.ಸಿ.ಬಿ. ಯಂತ್ರಕ್ಕೆ ಚಾಲಕರ ಹುದ್ದೆಗೆ ಮೂರು ಕೊಟೇಶನ್‌ದಾರರು ದರಪಟ್ಟಿಯನ್ನು ಸಲ್ಲಿಸಿದ್ದು, ಅದರಲ್ಲಿ ಸೋಮೇಶ್ವರ ಅರ್ಥ್ ಮೂವರ್ಸ್, ರೈಲ್ವೆ

ಸ್ಟೇಷನ್ ಹತ್ತಿರ ದೊಡ್ಡಬಳ್ಳಾಪುರ ರವರು ಕಡಿಮೆ ದರ ರೂ.8500/-ಗಳನ್ನು ಸಲ್ಲಿಸಿದ್ದು, ಅದರಂತೆ ಅಕ್ಟೋಬರ್-2009ರಿಂದ ಜಾರಿಗೆ ಬರುವಂತೆ ಸದರಿ ಮೊತ್ತವನ್ನು ಪಾವತಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಹಾಗೂ ಸದರಿ ಯಂತ್ರಕ್ಕೆ ಚಾಲಕರನ್ನು 2010-11ನೇ ಸಾಲಿಗೆ ಟೆಂಡರ್ ಮೂಲಕ ನಿಯೋಜಿಸಿಕೊಳ್ಳುವಂತೆ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ: 5/21**

ನಗರಸಭೆಯ ವ್ಯಾಪ್ತಿಯಲ್ಲಿ ಬರುವ ದೊಡ್ಡಚರಂಡಿಗಳಲ್ಲಿ ನಗರಸಭೆಯಲ್ಲಿ ಹೊಸದಾಗಿ ಖರೀದಿಸಿರುವ ಜೆ.ಸಿ.ಬಿ. ಯಂತ್ರದಿಂದ ತೆಗೆದಿರುವ ಹೂಳನ್ನು ಸಾಗಿಸುವ ವಿಚಾರ.

**ತೀರ್ಮಾನ ಸಂಖ್ಯೆ:5/21**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ, ರಾಜ್ಯದಲ್ಲಿ ಅಕಾಲಿಕ ಮಳೆಯಿಂದ ನೆರೆಯುಂಟಾಗಿದ್ದು, ಈ ನಗರದಲ್ಲಿಯೂ ಸಹ ಈ ಕೆಳಕಂಡ ಸ್ಥಳಗಳಲ್ಲಿ ಮಳೆಯಿಂದ ಚರಂಡಿಗಳಲ್ಲಿ ಹೂಳು ತುಂಬಿರುವುದನ್ನು ತುರ್ತಾಗಿ ಜೆ.ಸಿ.ಬಿ. ವಾಹನದಿಂದ ಹೂಳನ್ನು ತೆಗೆಯಲಾಗಿರುತ್ತದೆ. ಹಾಗೂ ತೆಗದ ಹೂಳನ್ನು ಬೇರೆಡೆಗೆ ಸಾಗಿಸಲು ಅಂದಾಜು ಮೊತ್ತ ರೂ.55,000/-ಗಳು ಆಗಿದ್ದು, ಸರ್ಕಾರದ ಸುತ್ತೋಲೆ ಸಂಖ್ಯೆ.ನಅಇ.43ಟಿಎಂಎಸ್.2004 ಬೆಂಗಳೂರು ದಿನಾಂಕ:07-07-2004ರಂತೆ ತುರ್ತು ಕಾರ್ಯವೆಂದು ಪರಿಗಣಿಸಿ, ಹೂಳನ್ನು ಸಾಗಿಸಿರುವ ಕಾರ್ಯಕ್ಕೆ ತಗಲಿರುವ ವೆಚ್ಚ ರೂ.54,818/-ಗಳನ್ನು ಪಾವತಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

---

**ಸಹಿ:-**
**(ಎನ್. ಮಲ್ಲಿಕಾರ್ಜುನ)**
**ಅಧ್ಯಕ್ಷರು,**
**ನಗರಸಭೆ, ದೊಡ್ಡಬಳ್ಳಾಪುರ.**

**"ನಕಲು ಪ್ರತಿ"**

**ಪೌರಾಯುಕ್ತರು,**
**ನಗರಸಭೆ, ದೊಡ್ಡಬಳ್ಳಾಪುರ.**